ಅಸಲು ದಾವಾ 186/2022 ಡಿ ಡಬ್ಲ್ಯೂ - 3 -ಎಸ್ ಕರಿಗೌಡ

**ಸಾಕ್ಷಿಯನ್ನು ದಿನಾಂಕಃ16.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್ ಎಂ ವಕೀಲರಿಂದಃ**

1. ನಮ್ಮ ಗ್ರಾಮದಿಂದ ಬೆಕ್ಕಳಲೆ ಗ್ರಾಮಕ್ಕೆ ಸುಮಾರು 10 ಕಿ ಮೀ ದೂರ ಇದೆ. ನನಗೆ ಕ್ರಯ ಪತ್ರದ ವಿಷಯ ಮತ್ತು ನಾನು ಅದಕ್ಕೆ ಸಾಕ್ಷಿಯಾಗಿ ಸಹಿ ಹಾಕಿದ್ದನ್ನು ಬಿಟ್ಟರೆ, ದಾವಾ ಸ್ವತ್ತಿನ ಮೂಲದ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಂಗಮ್ಮ ಕ್ರಯ ಪತ್ರವನ್ನು ಬರೆದುಕೊಟ್ಟಾಗ ಆರ್ ಟಿ ಸಿ ಮತ್ತು ಆಧಾರ್ ಕಾರ್ಡ್ ದಾಖಲೆ ತಂದಿದ್ದರು. ಕ್ರಯ ಪತ್ರ ಆಗುವ ಪೂರ್ವದಲ್ಲಿ ನಾನು ಮಾತುಕತೆಗೆ ಸೇರಿದ್ದೆ. ಮಾತುಕತೆಗೆ ನನ್ನನ್ನು ಕೃಷ್ಣಪ್ಪ ಕರೆದುಕೊಂಡು ಹೋಗಿದ್ದರು. ಮಾತುಕತೆ ಬೆಕ್ಕಳಲೆ ಗ್ರಾಮದಲ್ಲಿ ಆಗಿತ್ತು. ಕೃಷ್ಣಪ್ಪ ನನ್ನ ಸಂಬಂಧಿಯಲ್ಲ, ಅವನು ನನ್ನ ಪರಿಚಯಸ್ಥ. ನಾನು ಮತ್ತು ಕೃಷ್ಣಪ್ಪ ಸ್ನೇಹಿತರಾಗಿದ್ದರಿಂದ ಅವರು ನನ್ನನ್ನು ಮಾತುಕತೆಗೆ ಕರೆದಿದ್ದರು. ಕೃಷ್ಣಪ್ಪನವರ ಅಣ್ಣ ತಮ್ಮಂದಿರು ಮಾತುಕತೆಗೆ ಸೇರಿರಲಿಲ್ಲ. ನಿಂಗಮ್ಮನ ಮಕ್ಕಳು ಮಾತುಕತೆಗೆ ಬಂದಿದ್ದರು. ಅವರೆಂದರೆ ಸತೀಶ ಎಂಬ ಮಗ ಬಂದಿದ್ದ. ನಿಂಗಮ್ಮನ ಯಜಮಾನರು ಬದುಕಿಲ್ಲ. ನಿಂಗಮ್ಮನ ಕಡೆಯಿಂದ ಅವರ ಅಣ್ಣ ತಮ್ಮಂದಿರುವ ಮಾತುಕತೆಗೆ ಬಂದಿರಲಿಲ್ಲ. ನಿಂಗಮ್ಮ ನಮಗೆ ಜಮೀನಿನ ಮೂಲ ದಾಖಲೆ ಕೊಟ್ಟಿರಲಿಲ್ಲ.

2. ಸರ್ವೆ ನಂಬರ್ 63/2 ರ ಪೂರ್ತಿ ಸರ್ವೆ ನಂಬರ್ ಆರ್ ಟಿ ಸಿ ನಾನು ನೋಡಲಿಲ್ಲ. ನಾನು ಉಪನೊಂದಣಾಧಿಕಾರಿ ಕಛೇರಿಯಲ್ಲಿ ಪತ್ರ ಬರೆಸುವ ವೃತ್ತಿ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಸಿವಿಲ್ ಕೋರ್ಟ್ ನಲ್ಲಿ ಹಲವು ಪ್ರಕರಣಗಳಲ್ಲಿ

ಪತ್ರ ಬರೆಸಿದ ಬಗ್ಗೆ ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿ ದಿನ ಉಪನೊಂದಣಾಧಿಕಾರಿ ಕಛೇರಿಯಲ್ಲಿ ಪತ್ರ ಬರೆಸಿಕೊಟ್ಟು ಅದಕ್ಕೆ ಸಾಕ್ಷಿಯಾಗಿ ಸಹಿ ಹಾಕುವ ಕೆಲಸ ಮಾಡುತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬೆಕ್ಕಳಲೆ ಗ್ರಾಮಕ್ಕೆ ಹೋಗಿ ಕ್ರಯದ ಮಾತುಕತೆಗೆ ಸೇರಿದ್ದೆ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ನನ್ನ ಮುಂದೆ ಮಾತುಕತೆಯಾಯಿತು ಮತ್ತು ರೂ. 1,35,000/- ಹಣ ಕೊಟ್ಟರು ಎಂಬುದು ಸುಳ್ಳು ಎಂದರೆ ಸರಿಯಲ್ಲ. ನಿಂಗಮ್ಮನ ಮಗ ಸತೀಶ ಬಂದಿದ್ದ ಮತ್ತು ಅವನು ಎಲ್ಲವನ್ನೂ ನಮ್ಮ ತಾಯಿಗೆ ಬಿಟ್ಟಿದ್ದೇವೆ ಎಂದು ಹೇಳಿದ್ದ ಎಂಬುದು ಸುಳ್ಳು ಆಗಿದ್ದು, ಅವರ ಮಕ್ಕಳು ಬಂದಿರಲಿಲ್ಲ ಎಂದರೆ ಸರಿಯಲ್ಲ.

3. ಈ ಕೇಸ್ ನ ವಾದಿಗೆ 2 ನೇ ಪ್ರತಿವಾದಿ ಏನಾಗಬೇಕು ಎಂದು ನನಗೆ ಗೊತ್ತಿಲ್ಲ. ವಾದಿಯ ಹೆಸರಿಗೆ ಸೇರಿದ್ದ ಆಸ್ತಿ ನಿಂಗಮ್ಮನ ಹೆಸರಿಗೆ ತಪ್ಪಾಗಿ ಆರ್ ಟಿ ಸಿ ಬರುತ್ತಿದ್ದರಿಂದ ನಾನು ಮತ್ತು 2 ನೇ ಪ್ರತಿವಾದಿ ಸೇರಿಕೊಂಡು ಸುಳ್ಳು ಕ್ರಯ ಪತ್ರ ಸೃಷ್ಟಿಸಿದ್ದೇವೆ ಎಂದರ ಸರಿಯಲ್ಲ. ನಾನು ಜಮೀನಿನ ಸ್ಥಳಕ್ಕೆ ಹೋಗಿ ಬಾಜುದಾರರನ್ನು ಸ್ವಾಧೀನದ ಬಗ್ಗೆ ವಿಚಾರಣೆ ಮಾಡಿಲ್ಲ. ನಿಂಗಮ್ಮ ಸ್ವಾಧೀನದಲ್ಲಿ ಇರುವುದಾಗಿ ನಿಂಗಮ್ಮನೇ ನನಗೆ ಹೇಳಿದ್ದರು. ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ನಿಂಗಮ್ಮ ತಾನೇ ಸ್ವಾಧೀನದಲ್ಲಿ ಇರುವುದಾಗಿ ಹೇಳಿರುವ ಅಂಶವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ. ನಿಂಗಮ್ಮ ಸ್ವಾಧೀನದಲ್ಲಿ ಇರುವ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ

ಎಂದರೆ ನಾನು ಸ್ಥಳಕ್ಕೆ ಹೋಗಿ ನಿಂಗಮ್ಮ ಹೇಳಿದ್ದನ್ನು ನೋಡಿದ್ದೆ. ನಿಂಗಮ್ಮ ಯಾವತ್ತೂ ಸ್ವಾಧೀನದಲ್ಲಿ ಇರಲಿಲ್ಲ, ಅವರು ನನಗೆ ಸ್ವಾಧೀನದಲ್ಲಿ ಇರುವುದಾಗಿ ಹೇಳಿರಲಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯಿಂದ ಹಣ ಪಡೆದುಕೊಂಡು ಅವರು ಹೇಳಿದ ರೀತಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.